PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 7/12/20

ಸಮರ್ಥ ವಾದ ಮಂಡನೆಗೆ ಬಿಜೆಪಿ ಕಾರ್ಯತಂತ್ರ | ಗೊಂದಲ, ತಿಕ್ಕಾಟದ ನಿರೀಕ್ಷೆ

ಸರಕಾರಕ್ಕೆ ಚಳಿ ಬಿಡಿಸಲು ಪ್ರತಿಪಕ್ಷಗಳು ತಯಾರಿ

ವಿಕ ಸುದ್ದಿಲೋಕ ಬೆಂಗಳೂರು 7/12/20

ವಿಧಾನಮಂಡಲ ಚಳಿಗಾಲದ ಅಧಿವೇಶನ ಸೋಮವಾರದಿಂದ ಆರಂಭವಾಗುತ್ತಿದ್ದು, ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರದ ವೈಫಲ್ಯಗಳು ಹಾಗೂ ವಿವಾದಾತ್ಮಕ ತೀರ್ಮಾನಗಳನ್ನು ಮುಂದಿಟ್ಟುಕೊಂಡು ಸರಕಾರಕ್ಕೆ ಬಿಸಿ ಮುಟ್ಟಿಸಲು ಪ್ರತಿಪಕ್ಷಗಳು ಸಜ್ಜಾಗಿವೆ.

ಸಂಪುಟ ವಿಸ್ತರಣೆ-ಪುನರ್‌ರಚನೆಯ ಅನಿಶ್ಚಿತತೆ ಹಾಗೂ ಸಚಿವಾಕಾಂಕ್ಷಿಗಳ ಅಸಮಾಧಾನವೂ ಸೇರಿದಂತೆ ಕೆಲವು ರಾಜಕೀಯ ಗೊಂದಲಗಳ ನಡುವೆಯೇ ಸೋಮವಾರದಿಂದ ನಡೆಯುವ ಕಲಾಪ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಸಾಕ್ಷಿಯಾಗಲಿದೆ. ಸರಕಾರದ ಉದ್ದೇಶಿತ ಗೋಹತ್ಯೆ ನಿಷೇಧ ಹಾಗೂ ಲವ್ ಜಿಹಾದ್ ತಡೆ ಕಾಯಿದೆಗಳನ್ನು ಸಾರಸಗಟು ವಿರೋಧಿಸಲು ಪ್ರತಿಪಕ್ಷ ಕಾಂಗ್ರೆಸ್ ನಿರ್ಧರಿಸಿದೆ. ಈ ವಿಷಯಗಳು ಸದನದಲ್ಲಿ ಚರ್ಚೆಗೆ ಬಂದಾಗ ಕೋಲಾಹಲ ಏರ್ಪಡುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಹೀಗಾಗಿ ಈ ಅಧಿವೇಶನ ಸರಕಾರದ ಪಾಲಿಗೆ ಅಗ್ನಿಪರೀಕ್ಷೆಯಾಗಲಿದೆ.

ಜಟಾಪಟಿ: ಪ್ರವಾಹ ಪರಿಹಾರ-ಪುನರ್ವಸತಿ, ರಾಜ್ಯಕ್ಕೆ ಸಮರ್ಪಕ ನೆರವು ನೀಡಲು ಕೇಂದ್ರದ ನಿರ್ಲಕ್ಷ್ಯ, ಕಾನೂನು ಮತ್ತು ಸುವ್ಯವಸ್ಥೆ, ರಾಜ್ಯದ ಹಣಕಾಸು ಸ್ಥಿತಿಗತಿ, ಭ್ರಷ್ಟಾಚಾರ, ಅಭಿವೃದ್ಧಿ ಕೆಲಸಗಳ ಸ್ಥಗಿತ ಮತ್ತಿತರ ವಿಷಯಗಳ ಜತೆಗೆ ಭೂ ಸುಧಾರಣಾ ತಿದ್ದುಪಡಿ, ಬಿಬಿಎಂಪಿ ವಾರ್ಡ್‌ಗಳ ಹೆಚ್ಚಳ, ಕಾರ್ಮಿಕ ಕಾಯಿದೆ, ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಪ್ರಮುಖ ತಿದ್ದುಪಡಿ ಕಾಯಿದೆಗಳನ್ನು ಉಭಯ ಸದನಗಳಲ್ಲಿ ಅಂಗೀಕರಿಸಿಕೊಳ್ಳಲು ಸರಕಾರ ಉತ್ಸುಕವಾಗಿದೆ. ಆದರೆ ಪ್ರತಿಪಕ್ಷಗಳ ಕಡೆಯಿಂದ ಅಷ್ಟೇ ವಿರೋಧವೂ ಇದೆ. ಹೀಗಾಗಿ ಸರಕಾರ ಹಾಗೂ ಪ್ರತಿಪಕ್ಷಗಳ ನಡುವೆ ಜಟಾಪಟಿ ನಡೆಯುವ ಸಾಧ್ಯತೆಗಳಿವೆ.

- ಲವ್ ಜಿಹಾದ್
- ಗೋಹತ್ಯಾ ನಿಷೇಧ
- ಬಿಬಿಎಂಪಿ ಕಾಯಿದೆ
- ಪುರಸಭೆಯಲ್ಲಿ ಮಹಿಳೆ ಎಳೆದಾಟ ಪ್ರಕರಣ



ಕೆಸರೆರಚಾಟ ಯಾವುದಕ್ಕೆ

- ರೈತರ ಹೋರಾಟ
- ಪ್ರವಾಹ ಪರಿಹಾರ
- ನಿಗಮಮಂಡಳಿ
- ಲಿಂಗಾಯತ, ಕುರುಬರ ಮೀಸಲು

ಪ್ರಿಯಾಂಕ್ ಪರಿಷತ್ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ

ಇದೇ ಅಧಿವೇಶನದಲ್ಲಿ ಪರಿಷತ್ತಿನ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಬಿಜೆಪಿ ಈಗಾಗಲೇ ಪರಿಷತ್ ಕಾರ್ಯದರ್ಶಿಗೆ ಪತ್ರ ನೀಡಿ 10 ದಿನಗಳು ಕಳೆದಿವೆ. 14 ದಿನಗಳ ಬಳಿಕ ಆ ಸಂಬಂಧದ ಪ್ರಕ್ರಿಯೆಗಳಿಗೆ ಚಾಲನೆ ದೊರೆಯಲಿದೆ. ಹೀಗಾಗಿ ಇದೇ ವಾರದಲ್ಲಿ ಅವಿಶ್ವಾಸ ನಿರ್ಣಯ ಪತ್ರವನ್ನು ಚರ್ಚೆಗೆ ಕೈಗೆತ್ತಿಕೊಳ್ಳಬೇಕೆಂದು ಬಿಜೆಪಿ ಒತ್ತಾಯಿಸುವ ಸಾಧ್ಯತೆಗಳಿವೆ. ಉಪ ಸಭಾಪತಿ ಸ್ಥಾನ ಅಲಂಕರಿಸಿರುವ ಜೆಡಿಎಸ್ ನಡೆ ನಿಗೂಢವಾಗಿದೆ.

ಒಳ ಒಪ್ಪಂದದ ಅಗತ್ಯವಿಲ್ಲ

ಬೆಂಗಳೂರು: "ಬಿಜೆಪಿಗೆ ಈಗ ಕುಮಾರಸ್ವಾಮಿಯವರ ಸಹಾಯದ ಅಗತ್ಯವಿಲ್ಲ. ಆ ಪಕ್ಷದ ಜತೆಗೆ ಒಳ ಒಪ್ಪಂದ, ಹೊರ ಒಪ್ಪಂದದ ಅಗತ್ಯವಿಲ್ಲ," ಎಂದು ಸಚಿವ ಆರ್. ಅಶೋಕ್ ಹೇಳಿದರು. "ಬಿಜೆಪಿ ಎಂದಿಗೂ ಕೊಟ್ಟ ಮಾತಿಗೆ ತಪ್ಪುವುದಿಲ್ಲ. ಈ ಹಿಂದೆ ಕೊಟ್ಟ ಮಾತಿನ ಪ್ರಕಾರ ಕುಮಾರಸ್ವಾಮಿಯವರಿಗೆ 20 ತಿಂಗಳು ಅಧಿಕಾರ ಕೊಟ್ಟಿದ್ದೆವು. ಆದರೆ ಕಾಂಗ್ರೆಸ್‌ನವರು 5 ವರ್ಷ ನೀವೇ ಸಿಎಂ ಎಂದು ಹೇಳಿ ಒಂದೇ ವರ್ಷಕ್ಕೆ ಇಳಿಸಿದರು. ಕಾಂಗ್ರೆಸ್ ವಿಷ ಕಕ್ಕುವ ಪಕ್ಷ. ಈ ಪಕ್ಷವನ್ನು ನಂಬಿದರೆ ಗೋವಿಂದಾ..." ಎಂದು ವ್ಯಂಗ್ಯವಾಡಿದರು.

ಆಡಳಿತ ಪಕ್ಷದೊಳಗಿನ ಅಸಮಾಧಾನ, ಒಡಕಿನ ಧ್ವನಿಯ ಲಾಭ ಪಡೆದು ಆಡಳಿತ ಪಕ್ಷಕ್ಕೆ ಮುಜುಗರ ಉಂಟು ಮಾಡಲು ಬಿಜೆಪಿಯೊಳಗಿನ ಇತ್ತೀಚಿನ ರಾಜಕೀಯ ವಿದ್ಯಮಾನಗಳನ್ನು ಸಂದರ್ಭ ಬಂದಾಗ ಪ್ರಸ್ತಾಪಿಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ತಂತ್ರ ರೂಪಿಸುತ್ತಿದೆ.

ಈ ರೀತಿಯ ಸನ್ನಿವೇಶ ಎದುರಾದರೆ ಅದನ್ನು ಯಾವ ರೀತಿ ಎದುರಿಸಬೇಕು ಎಂಬುದರ ಬಗ್ಗೆಯೂ ಆಡಳಿತ ಪಕ್ಷ ಪ್ರತಿತಂತ್ರ ರೂಪಿಸುವ ನಿಟ್ಟಿನಲ್ಲಿ ಮಗ್ನವಾಗಿದೆ.

ಸ್ಪೀಕರ್ ಪರಿಶೀಲನೆ: ಈ ಮಧ್ಯೆ ಸ್ಪೀಕರ್ ಕಾಗೇರಿ ಅವರು ಕಲಾಪಕ್ಕೆ ನಡೆದಿರುವ ಸಿದ್ಧತೆಗಳನ್ನು ವಿಧಾನಸಭಾ ಸಚಿವಾಲಯದ ಅಧಿಕಾರಿಗಳೊಂದಿಗೆ ಭಾನುವಾರ ಪರಿಶೀಲಿಸಿದರು. ಸಚಿವರು, ಶಾಸಕರು, ಅಧಿಕಾರಿ ಸಿಬ್ಬಂದಿಗಳಿಗೆ ಕೊರೊನಾ ಟೆಸ್ಟ್ ನಡೆಸಲು ಬ್ಯಾಂಕ್ವೆಟ್ ಹಾಲ್ ಮೀಸಲಿಡಲಾಗಿದೆ.

ಬಿಜೆಪಿ-ಜೆಡಿಎಸ್ ಪಕ್ಷಗಳು ನ್ಯಾಚುರಲ್ ಅಲಯನ್ಸ್!

ಹುಬ್ಬಳ್ಳಿ: "ಪರಿಷತ್ ಸಭಾಪತಿ ಆದರನ್ನು ಕೆಳಗಿಳಿಸಲು ಜೆಡಿಎಸ್ ನಮ್ಮ ಜೊತೆಗೆ ಕೈಜೋಡಿಸಿದರೆ ಒಳ್ಳೆಯದು. ನಾವು ಸಹ ಆದರ ನಿರೀಕ್ಷೆಯಲ್ಲಿದ್ದೇವೆ. ಬಿಜೆಪಿ ಮತ್ತು ಜೆಡಿಎಸ್‌ನದ್ದು ಸಹಜ ಒಪ್ಪಂದ (ನ್ಯಾಚುರಲ್ ಅಲಯನ್ಸ್)" ಎಂದು ಬಣ್ಣಿಸಿದ ಸಚಿವ ಶೆಟ್ಟರ್, "ಜೆಡಿಎಸ್ ನಮಗೆ ಬೆಂಬಲ ಕೊಟ್ಟರೆ ಅದನ್ನು ಸ್ವಾಗತಿಸುತ್ತೇವೆ" ಎಂದರು. "ಬೆಳಗಾವಿ ಲೋಕಸಭಾ ಉಪಚುನಾವಣೆಗೆ ನಾನು ಸ್ಪರ್ಧಿಸುತ್ತೇನೆ ಎಂಬುದು ಊಹಾಪೋಹ. ಬೆಳಗಾವಿ ಅಭ್ಯರ್ಥಿ ಬಗ್ಗೆ ಈವರೆಗೂ ಎಲ್ಲಿಯೂ ಚರ್ಚೆಯಾಗಿಲ್ಲ" ಎಂದರು.

... Mahakavi Road, Chamarajpet, Bengaluru - 560018 (Ph: 080-40877666, Fax: 080-40877606/696) ... Fourth Estate Ltd. No 9/10/11-A, 4th Main, Bommasandra Industrial Area, Hosur Road.